# ಕೃತಜ್ಞತೆಗಳು

ಎಂ.ಫಿಲ್ ಪದವಿ ಓದಿನ ತದನಂತರದಲ್ಲಿ ತೊಡಗಿಸಿಕೊಂಡಾಗಲೇ, ಪಿಎಚ್. ಡಿ ಪದವಿ ಅಧ್ಯಯನ ನಡೆಸಬೇಕೆಂದು ಇಷ್ಟಪಟ್ಟಿದ್ದೆ. ಮೊದಲ ನೇಮಕಾತಿಯಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿತ ಸರಕಾರಿ ಪ್ರಥಮ ದರ್ಜೆ ಕಾಲೇಜು ಹೊಸದುರ್ಗದಲ್ಲಿ ಕಾರ್ಯ ನಿರ್ವಹಿಸಬೇಕಾಗಿ ಬಂತು. ಮಂಗಳೂರಿನಲ್ಲಿ ಎಂ. ಎ. ಮಾಡುತ್ತಿದ್ದಾಗ ನನ್ನ ಗುರುಗಳಾಗಿದ್ದ ಡಾ. ಕೆ. ಕೇಶವ ಶರ್ಮರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿರುವುದು ತಿಳಿದು, ಭೇಟಿ ಮಾಡಿ, ಅವಕಾಶಕ್ಕಾಗಿ ವಿನಂತಿಸಿಕೊಂಡೆ. ಅನುಮತಿ ನೀಡಿ, ಮಾರ್ಗದರ್ಶನ ಮಾಡಿದ ಕನ್ನಡ ಭಾರತಿ ಪ್ರವಾಚಕರಾದ ಡಾ. ಕೆ. ಕೇಶವ ಶರ್ಮರಿಗೆ ಗೌರವಪೂರ್ವಕವಾದ ಮೊದಲ ಕೃತಜ್ಞತೆಗಳು.

ಈ ನನ್ನ ಅಧ್ಯಯನದಲ್ಲಿನ ಅಗತ್ಯಗಳನ್ನು ಪೂರೈಸಿದವರು ಹತ್ತು ಹಲವಾರು ಮಂದಿ. ಅಂದು ಹೊಸದುರ್ಗ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಡಾ. ಎಸ್. ಜಿ. ಸಿದ್ಧರಾಮಯ್ಯನವರು ಸಲಹೆ ಮತ್ತು ಪುಸ್ತಕಗಳನ್ನು ನೀಡಿ ಸಹಕರಿಸಿದ್ದಾರೆ. ಕಾಲೇಜಿನ ಗ್ರಂಥಪಾಲಕರಾದ ಉಮೇಶ ಕೆ. ಬಾಗೇವಾಡಿ ಮತ್ತು ಹೊಸದುರ್ಗ ಕಾಲೇಜಿನ ಸಹದ್ಯೋಗಿಗಳನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತೇನೆ. ಉಜಿರೆ ಶ್ರೀ ಧರ್ಮಸ್ಥಳ ಕಾಲೇಜಿನ ಪ್ರಾಂಶುಪಾಲರಾದ ಡಾ. ಯಶೋವರ್ಮ ಅವರು ಕಾಲೇಜಿನ ಗ್ರಂಥಾಲಯ ಮತ್ತು ಹಾ. ಮಾ ನಾಯಕ ಗ್ರಂಥಾಲಯವನ್ನು ಬಳಸಿಕೊಳ್ಳಲು ಅನುಮತಿ ನೀಡಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು.

ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಗ್ರಂಥಾಲಯದ ಪುಸ್ತಕಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಅಂದಿನ ಕನ್ನಡ ವಿಭಾಗದ ಅಧ್ಯಕ್ಷರಾಗಿದ್ದ ಡಾ.ಬಿ.ಎ. ವಿವೇಕ ರೈಯವರಿಗೆ ಹಾಗೂ ವಿಶ್ವವಿದ್ಯಾನಿಲಯದ ಗ್ರಂಥಾಲಯ ಸಿಬ್ಬಂದಿಗಳಿಗೆ, ಕನ್ನಡ ಭಾರತಿ ಗ್ರಂಥಾಲಯದ ಸಿಬ್ಬಂದಿಗಳಿಗೆ, ಮಂಗಳೂರು ಕೇಂದ್ರ ಗ್ರಂಥಾಲಯ ಮತ್ತು ಬೆಳ್ತಂಗಡಿ ಗ್ರಂಥಾಲಯ ಸಿಬ್ಬಂದಿಗಳಿಗೆ ನನ್ನ ಕೃತಜ್ಞತೆಗಳು.

ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ನಿರ್ದೇಶಕರಾದ ಪ್ರೊ. ಶ್ರೀಕಂಠ ಕೂಡಿಗೆ, ಪ್ರಾಧ್ಯಾಪಕರಾದ ಪ್ರೊ. ತಿ.ನಂ ಶಂಕರನಾರಾಯಣ, ಡಾ. ಬಸವರಾಜ ನೆಲ್ಲಿಸರ, ಡಾ. ಶಿವಕುಮಾರ ಸ್ವಾಮಿ, ಡಾ. ಸಣ್ಣರಾಮ, ಡಾ. ರಂಗರಾಜು, ಡಾ. ಪ್ರಶಾಂತ ನಾಯಕ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು. ವಿಭಾಗದ ಕಚೇರಿ ಸಿಬ್ಬಂದಿಯವರ ಸಹಕಾರ ನೆನಪಿಸಿಕೊಳ್ಳುತ್ತೇನೆ.

ನನ್ನ ಅಧ್ಯಯನದಲ್ಲಿನ ಎಲ್ಲಾ ಸಾಧ್ಯತೆಗಳ ಹಿಂದಿನ ಕಷ್ಟಗಳನ್ನು ಸಂಸಾರ ಬದುಕಿನಲ್ಲಿ ಸಹಿಸಿಕೊಂಡ ಪತ್ನಿ ಶ್ರೀಮತಿ ಧನಲಕ್ಷ್ಮಿ, ಮಗ ಪ್ರಣೀತ್ ಕುಮಾರ್, ಮಗಳು ಪ್ರತೀಕ್ಷಾರನ್ನು ನೆನಪಿಸಿಕೊಳ್ಳಲೇ ಬೇಕಾಗಿದೆ.

ಈ ಮಹಾ ಪ್ರಬಂಧವನ್ನು ಅಂದವಾಗಿ ಮುದ್ರಿಸುವಲ್ಲಿಂದ ತೊಡಗಿ ಪೂರ್ಣ ರೂಪ ತರುವಲ್ಲಿ ಸಹಕರಿಸಿದವರು ಡಾ. ಕಿಶೋರ್‌ಕುಮಾರ್ ರೈ., ಶೇಣಿ ಹಾಗು ಜ್ಯೋತಿ ಕಿಶೋರ್ ರೈ ಅವರಿಗೆ ನನ್ನ ಕೃತಜ್ಞತೆಗಳು.

ಈ ಸಂಶೋಧನೆಗೆ ಸಹಕರಿಸಿದ ವಿದ್ಯಾರ್ಥಿ ಸ್ನೇಹಿತರಿಗೆ ಮತ್ತು ಪ್ರತ್ಯಕ್ಷ – ಪರೋಕ್ಷವಾಗಿ ನೆರವಾದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಸ್ಥಳ : ಜ್ಞಾನ ಸಹ್ಯಾದ್ರಿ

ದಿನಾಂಕ: ೩೦.೦೪.೨೦೦೫

ಟಿ. ಕೆ. ಶರತ್ ಕುಮಾರ್